629 (630) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) :-
ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ತಳಿಗಳು ಎಂದು ಗುರುತಿಸಲಾಗಿರುವ ಗೋತಳಿಗಳು ಯಾವುವು?

ಆ) ರಾಜ್ಯದಲ್ಲಿರುವ ವಿವಿಧ ತಳಿಗಳ ಒಟ್ಟು ಸಂಖ್ಯೆ ಎಷ್ಟು ?

ಇ) ರಾಜ್ಯದ ತಳಿಗಳು ಎಂದು ಗುರುತಿಸಲಾಗಿರುವ ಎಮ್ಮೆ ತಳಿಗಳು ಯಾವುವು? ಈ ವಿವಿಧ ತಳಿಗಳ ಒಟ್ಟು ಸಂಖ್ಯೆ ಎಷ್ಟು ?

ಈ) ಗೋತಳಿಗಳ ಸಂರಕ್ಷಣೆಗೆ ಯೋಜನೆ ರೂಪಿಸಿರುವಂತೆ ಎಮ್ಮೇ ತಳಿಗಳ ರಕ್ಷಣೆಗೆ ಸರ್ಕಾರ ಯೋಜನೆ ರೂಪಿಸಿದೆಯೆ ?

ಉ) ಹಾಗಿದ್ದಲ್ಲಿ, ಈ ಯೋಜನೆ ರೂಪುರೇಷೆಗಳೇನು ?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :-

ಅ) ರಾಜ್ಯದ ತಳಿಗಳು ಎಂದು ಗುರುತಿಸಲಾಗಿರುವ ಗೋತಳಿಗಳು ಆರು ಅವುಗಳು 1. ಹಳ್ಳಿಕಾರ್, 2. ಅಮೃತ ಮಹಲ್, 3. ಕಿಲಾರ್, 4. ದೇವಣಿ, 5. ಕೃಷ್ಣವ್ಯಾಲಿ ಮತ್ತು 6. ಮಲೆನಾಡು ಗಿಡ್ಡ ಎಂಬ ತಳಿಗಳು. ರಾಜ್ಯದಲ್ಲಿರುವ ವಿವಿಧ ಗೋತಳಿಗಳ ಒಟ್ಟು ಸಂಖ್ಯೆ 96,95,930 ಅವುಗಳ ತಳಿವಾರು ವಿವರ ಈ ಕೆಳಗಿನಂತಿವೆ :-

ಮಿಶ್ರ ತಳಿಗಳು		ವಿದೇಶಿ ತಳಿಗಳು		ಸ್ಥಳೀಯ ತಳಿಗಳು	
ಜರ್ಸಿ	7,11,049	ಜರ್ಸಿ	787	ಹಳ್ಳಿಕಾರ್	21,08,399
ಹೆಚ್ ಎಫ್	8,42,928	ಹೆಚ್ ಎಫ್	849	ಅಮೃತ ಮಹಲ್	68,669
ಇತರೆ	56,473	ಇತರೆ	484	ಕಿಲಾರಿ	2,90,136
				ದೇವಣಿ	35,768
				ಮಲೆನಾಡು ಗಿಡ್ಡ	14,41,482
				ಕೃಷ್ಣವ್ಯಾಲಿ	281
				ಇತರೆ	40,38,625

ಇ) ಎಮ್ಮೆಗಳಲ್ಲಿ ರಾಜ್ಯದ ತಳಿಗಳು ಎಂದು ಗುರುತಿಸಲಾದ ಯಾವುದೇ ತಳಿಗಳು ಇರುವುದಿಲ್ಲ, ಆದರೆ ಎಮ್ಮೆಗಳಲ್ಲಿ ಸೂರ್ತಿ, ಮುರ್ರಾ, ಪಂಡರಾಪುರಿ, ಮೆಹಸಾನಾ ಮತ್ತು ಇತರೆ ಎಮ್ಮೆ ತಳಿಗಳನ್ನು ಹೈನುಗಾರಿಕೆಗಾಗಿ ನಿರ್ವಹಣೆ ಮಾಡಲಾಗುತ್ತಿದೆ. ಇವುಗಳ ಒಟ್ಟು ಸಂಖ್ಯೆ 40,23,832 ಇದ್ದು ತಳಿವಾರು ಈ ಕೆಳಕಂಡಂತೆ ಇವೆ.

1.	ಸೂರ್ತಿ	...	1,47,782
2.	ಮುರ್ರಾ	...	38,673
3.	ಪಂಡರಾಪುರಿ	...	4,574
4.	ಮೆಹಸಾನಾ	...	838
5.	ಸ್ಥಳೀಯ ಎಮ್ಮೆಗಳು	...	38,31,965
	ಒಟ್ಟು	...	40,23,832

ಈ) ಗೋತಳಿ ಸಂರಕ್ಷಣೆಗೆ ಯೋಜನೆ ರೂಪಿಸಿದಂತೆ ಎಮ್ಮೆ ತಳಿ ರಕ್ಷಣೆಗೆ ಯಾವುದೇ ವಿಶೇಷ ಯೋಜನೆ ರೂಪಿಸಲಾಗಿಲ್ಲ. ಆದರೆ ಈ ಎಮ್ಮೆ ತಳಿಗಳ ಸಂವರ್ಧನೆಗಾಗಿ ಸೂರ್ತಿ ಮತ್ತು ಮುರ್ರಾ ಘನೀಕೃತ ವೀರ್ಯನಳಿಕೆಗಳನ್ನು ರಾಜ್ಯದಲ್ಲಿರುವ ಎಲ್ಲಾ ಪಶು ಚಿಕಿತ್ಸಾ ಕೇಂದ್ರಗಳಿಗೆ ಸರಬರಾಜು ಮಾಡಿ ಕೃತಕ ಗರ್ಭಧಾರಣೆ ಮುಖಾಂತರ ತಳಿ ಸಂವರ್ಧನೆಗೆ ಕ್ರಮವಹಿಸಲಾಗಿದೆ.

ಉ) ಅನ್ವಯಿಸುವುದಿಲ್ಲ

630 (1135) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) :- ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮಾನ್ಯ ಕಾರ್ಮಿಕ ಸಚಿವರು ಸದನದಲ್ಲಿ ಈ ಹಿಂದೆ ಹೇಳಿಕೆ ನೀಡಿದಂತೆ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ 151 ಮಂದಿ ಅನರ್ಹರಿಗೆ ನೇಮಕಾತಿ ನೀಡಿದ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಪದೋನ್ನತಿಯನ್ನು ತನಿಖಾ ವರದಿ ಬರುವವರೆಗೂ ತಡೆಹಿಡಿಯಲಾಗಿದೆಯೇ ?

ಆ) ಸಿ.ಓ.ಡಿ. ತನಿಖಾ ವರದಿಯನ್ನು ಮೂರು ತಿಂಗಳೊಳಗೆ ಪಡೆದು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ಮಾನ್ಯ ಕಾರ್ಮಿಕ ಸಚಿವರು ಸದನದಲ್ಲಿ ಭರವಸೆ ನೀಡಿದ್ದು ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಇ) ತನಿಖಾ ಸಂಸ್ಥೆಯು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆಯೇ ? ಅಂತಿಮ/ಮಧ್ಯಂತರ ವರದಿ ಸಲ್ಲಿಸಿದ್ದಲ್ಲಿ ವರದಿಯಾನುಸಾರ ಪ್ರಕರಣದಲ್ಲಿ ಭಾಗಿಯಾಗಿರುವವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಈ) ವರದಿ ಇನ್ನೂ ಬಾರದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು ; ತನಿಖೆ ಪೂರ್ಣಗೊಳ್ಳದೆ ಹಾಗೂ ತನಿಖಾ ವರದಿಯನ್ನು ಪಡೆಯದೆ ತಪ್ಪಿತಸ್ಥ ಅಧಿಕಾರಿಗಳಿಗೆ ಬಡ್ತಿ ನೀಡಲಾಗಿರುವುದು ಅಲ್ಲದೆ, ಅದೇ ಸ್ಥಳಗಳಲ್ಲಿ ಮುಂದುವರೆಸಿರುವುದು ನಿಜವೇ?

ಉ) ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಅಧಿಕಾರಿಗಳನ್ನು ಅಮಾನತುಗೊಳಿಸುವುದರ ಬದಲಿಗೆ ವಿಚಾರಣೆ ಪೂರ್ಣಗೊಳ್ಳುವ ಮೊದಲೇ ಇವರುಗಳಿಗೆ ಬಡ್ತಿ ನೀಡಿ ಅದೇ ಸ್ಥಳಗಳಲ್ಲಿ ಮುಂದುವರೆಸಿರುವುದೇ ತನಿಖೆ ವಿಳಂಬಗೊಳ್ಳಲು ಪ್ರಮುಖ ಕಾರಣವಾಗಿರುತ್ತದೆ ಎಂಬುದು ನಿಜವೇ ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು) :-

ಅ) ಲಭ್ಯವಿರುವ ಮಾಹಿತಿ ಪ್ರಕಾರ ಈ ರೀತಿ ಹೇಳಿಕೆ ನೀಡಿರುವುದಿಲ್ಲ

ಇಲ್ಲ

ಆ) 3 ತಿಂಗಳೊಳಗಾಗಿ ವರದಿ ನೀಡುವಂತೆ ಸಿ.ಓ.ಡಿ.ಗೆ ಆದೇಶಿಸಲಾಗಿದೆ. ತನಿಖೆ ಪ್ರಗತಿಯಲ್ಲಿದೆ.

ಇ) ಇಲ್ಲ